ಇ) ಸರ್ಕಾರ ಇವರನ್ನು ಖಾಯಂಗೊಳಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದೇ: ಹಾಗಿದ್ದಲ್ಲಿ ಯಾವಾಗ:

ಈ) ಇದುವರೆಗೆ ಖಾಯಂ ಗೊಳಿಸದಿರಲು ಕಾರಣಗಳೇನು? ವಿವರ ಒದಗಿಸುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಅಂತಹ ಹುದ್ದೆಗಳಲ್ಲಿ ಒಟ್ಟು 511 ಕಾರ್ಮಿಕರು ಕ್ರೋಡೀಕೃತ ವೇತನದ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ.

ಆ) 275 ನೌಕರರು 1990 ಮತ್ತು 236 ನೌಕರರು 1994 ರಿಂದ ಕೆಲಸ ಮಾಡುತ್ತಿದ್ದಾರೆ.

ಇ) ಸದ್ಯಕ್ಕೆ ಅಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಈ) ಪ್ರಸ್ತುತ ಕಂಪನಿಯ ಆರ್ಥಿಕ ಪರಿಸ್ಥಿತಿ ಆಶಾದಾಯಕವಾಗಿಲ್ಲದ ಕಾರಣ, ಸದರಿಯವರನ್ನು ಖಾಯಂಗೊಳಿಸಿರುವುದಿಲ್ಲ. ಆದರೂ ಸಹ ಇವರ ವೇತನ ಪರಿಷ್ಕರಣೆಯ ಕುರಿತು ಸಂಘದ ಪದಾಧಿಕಾರಿಗಳ ಜೊತೆ ಚರ್ಚಿಸಲಾಗುತ್ತಿದೆ.

ಬಣಗಾರ ಜನಾಂಗವನ್ನು ಜಾತಿ ಪಟ್ಟಿಯಲ್ಲಿ ಸೇರಿಸುವುದು

4145 (4763) : ಶ್ರೀ ಆಗರ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಹೊಸನಗರ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್. ಪುರ ಮತ್ತು ಕೊಪ್ಪ ತಾಲ್ಲೂಕಿನಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ವಾಸಿಸುವ ಬಣಗಾರ ಜನಾಂಗವನ್ನು ಯಾವುದೇ ಜಾತಿ ಪಟ್ಟಿಯಲ್ಲಿ ಸೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಜನಾಂಗದವರು ಜಾತಿ ದೃಢೀಕರಣ ಪತ್ರ ಇಲ್ಲದೆ ತೊಂದರೆಗೊಳಗಾಗಿರುವುದರಿಂದ ಸರ್ಕಾರ ಕೂಡಲೇ ಸಮೀಕ್ಷೆ ನಡೆಸಿ ಜಾತಿ ಪಟ್ಟಿಗೆ ಸೇರ್ಪಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದೇ?

ಇ) ಈ ಕಾರ್ಯವನ್ನು ಒಂದು ಕಾಲ ಮಿತಿಯೊಳಗೆ ಸರ್ಕಾರ ಮಾಡುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಬಣಗಾರ ಜಾತಿಯು ಪ್ರಸ್ತುತ ಸರ್ಕಾರಿ ಆದೇಶದಲ್ಲಿ ಪ್ರವರ್ಗ 3(ಎ)ನಲ್ಲಿ ಬಲಿಜ ಜಾತಿಯ ಉಪಜಾತಿಯಾಗಿ ಕ್ರಮಸಂಖ್ಯೆ 3(ಐ) ನೇರಲ್ಪಟ್ಟಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಕಬ್ಬು ಬೆಳೆಗಾರರ ಸಮಸ್ಯೆಗಳು

4146 (4756) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕ್ಕರೆಯ ಬೆಲೆ ಕುಸಿತದಿಂದಾಗಿ ರಾಜ್ಯದಲ್ಲಿನ ಕಬ್ಬು ಬೆಳೆಗಾರರ ಪರಿಸ್ಥಿತಿ ತೀವ್ರವಾಗಿ ಹದಗೆಟ್ಟು ರೈತರಿಗೆ ಸಮಸ್ಯೆಯಾಗಿರುವುದನ್ನು ಸರ್ಕಾರವು ಮನಗಂಡಿದೆಯೇ?

ಆ) ಹಾಗಿದ್ದಲ್ಲಿ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಸರ್ಕಾರ ಆಯೋಜಿಸಿರುವಂತೆಯೇ ಅನುಷ್ಠಾನಗೊಳಿಸಿರುವ ಕ್ರಮಗಳೇನು?